

# ಫ್ರೆಂಚ್ ಕ್ರಾಂತಿ ಮತ್ತು ವೈಭವಯುತ ವರ್ಸೈಲ್ಸ್ ಅರಮನೆ

**17–18ನೇ ಶತಮಾನದ ಫ್ರೆಂಚ್ ಇತಿಹಾಸದ ದರ್ಶನ ಮಾಡಿಸುವ ವರ್ಸೈಲ್ಸ್ ಅರಮನೆ, ಆಡಳಿತದೊಂದಿಗೆ ರಾಜರ ಆಡಂಬರದ ಜೀವನಶೈಲಿಗೂ ಸಾಕ್ಷಿಯಂತಿದೆ. ಪ್ರತಿ ಕಾಲಘಟ್ಟದಲ್ಲಿಯೂ ವಿನ್ಯಾಸದಲ್ಲಿ ಉತ್ಕೃಷ್ಟಗೊಂಡ ಅರಮನೆ, ಇಂದು ಐತಿಹಾಸಿಕ ಸ್ಮಾರಕವಾಗಿ ಗಮನಸೆಳೆಯುತ್ತಿದೆ.**

■ **ಕೆ.ಪಿ. ಸತ್ಯನಾರಾಯಣ**

ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನ ಹೊರವಲಯದಲ್ಲಿರುವ ವರ್ಸೈಲ್ಸ್ ಅರಮನೆ (The Château de Versailles) ಯುನೆಸ್ಕೊ ಮಾನ್ಯತೆ ಪಡೆದ ವಿಶ್ವ ಪಾರಂಪರಿಕ ಸ್ಥಳ. ಫ್ರೆಂಚ್ ಆಡಳಿತದ ಮೈಲಿಗಲ್ಲುಗಳನ್ನು ಅವಲೋಕನ ಮಾಡಿಸುವ ತಾಣ. ಹಿಂದೊಮ್ಮೆ ಫ್ರೆಂಚ್ ರಾಜಾಡಳಿತದ ಕೇಂದ್ರವಾಗಿದ್ದ ವರ್ಸೈಲ್ಸ್‌ನ ಕಟ್ಟಡಗಳೀಗ ಐತಿಹಾಸಿಕ ಸ್ಮಾರಕಗಳಾಗಿದ್ದು, ಇಲ್ಲಿನ ವಸ್ತು ಪ್ರದರ್ಶನಾಲಯಕ್ಕೆ ಅಸಂಖ್ಯಾತ ಕಲಾಸಕ್ತರು ಭೇಟಿ ಕೊಡುತ್ತಾರೆ.

ಐಷಾರಾಮಿ ಕೊಠಡಿಗಳು, ಕನ್ನಡಿಗಳ ಹಜಾರ, ಎಲ್ಲಕ್ಕೂ ಕಳಶಪ್ರಾಯವಾದ ರಾಯಲ್ ಒಪೆರಾ ಹಾಲ್, ಉದ್ಯಾನವನ, ಅದರೊಳಗಿನ ಕಾರಂಜಿ, ಶಿಲ್ಪ ಕಲಾಕೃತಿಗಳು ಮನಸೂರೆಗೊಳ್ಳುತ್ತವೆ. ಫ್ರೆಂಚ್ ಕ್ರಾಂತಿ ಸಮಯದಲ್ಲಿ ಈ ಅರಮನೆಯ ಅಮೂಲ್ಯ ವಸ್ತುಗಳನ್ನು ಹೊತ್ತೊಯ್ದು, ಕಟ್ಟಡಗಳಿಗೂ ಹಾನಿ ಮಾಡಲಾಗಿತ್ತಾದರೂ, ಅವುಗಳಲ್ಲಿ ಬಹುತೇಕ ವಸ್ತುಗಳನ್ನು ಮರಳಿ ತಂದು ಇಲ್ಲಿ ಪ್ರದರ್ಶನಕ್ಕಿರಿಸಲಾಗಿದೆ. ಅರಮನೆಯನ್ನು ಯಥಾಸ್ಥಿತಿಗೆ ತರಲಾಗಿದೆ. 1,00,000 ಚಿನ್ನದ ಎಲೆಗಳನ್ನೊಳಗೊಂಡ 'ರಾಯಲ್ ಗೇಟ್ ಆಫ್ ವರ್ಸೈಲ್ಸ್' ಈಗಿಲ್ಲದಿದ್ದರೂ, 2010ರಲ್ಲಿ ಮರುಸ್ಥಾಪಿಸಲಾದ ಅದರ ನಿಖರ ಪ್ರತಿಕೃತಿಯನ್ನು ಕಾಣಬಹುದು.

## ಅರಮನೆಯ ಹೆಜ್ಜೆಗುರುತು

ನಾಲ್ಕು ನೂರು ವರ್ಷಗಳ ಹಿಂದೆ ವರ್ಸೈಲ್ಸ್ ಅರಣ್ಯದಿಂದ ಆವೃತವಾದ ಒಂದು ಸಣ್ಣ ಹಳ್ಳಿಯಾಗಿತ್ತು. ಸಂತ ಜ್ಯೂಲಿಯನ್‌ನ ಪೂರ್ವಿಕರಾಗಿದ್ದ ಗೊಂಡಿ ಎಂಬ ಕುಟುಂಬದವರ ನೆಲೆಯಾಗಿತ್ತು. ಫ್ರೆಂಚ್ ರಾಜನಾದ ನಾಲ್ಕನೇ ಹೆನ್ರಿ 1589ರಲ್ಲಿ ಇಲ್ಲಿಗೆ ಬೇಟೆಯಾಡಲು ಬಂದವನು ಆ ಪರಿಸರಕ್ಕೆ ಮನಸೋತು ಪದೇ ಪದೇ ಬರಲಾರಂಭಿಸಿದ. ಅವನ ನಂತರ ಅವನ ಮಗ ಎಂಟನೆಯ ಲೂಯಿಸ್ 162324ರಲ್ಲಿ ಇಲ್ಲಿ ಸ್ವಲ್ಪ ಜಾಗ ಕೊಂಡು, ಬೇಟೆಗಾಗಿ ಬಂದಾಗ ಉಳಿದುಕೊಳ್ಳಲು ಎರಡು ಮಹಡಿ ಒಂದು ಕಟ್ಟಡ ಕಟ್ಟಿಸಿದ. 1630ರ ನವೆಂಬರ್ ತಿಂಗಳ ಒಂದು ದಿನ ಅವನು ಇಲ್ಲಿ ಉಳಿದುಕೊಂಡಿದ್ದಾಗ ಅವನ ತಾಯಿಯೇ ಶತ್ರುಗಳ ಜತೆ ಸೇರಿ ಪ್ಯಾರಿಸ್‌ನ ಆಡಳಿತ ಪಡೆದುಕೊಳ್ಳಲು ಹವಣಿಸಿದಳು. ಆದರೆ ರಾಜ ಆ ಪ್ರಯತ್ನವನ್ನು ವಿಫಲಗೊಳಿಸಿ ತಾಯಿಯನ್ನು ದೇಶಾಂತರ ಕಳಿಸಿದ. ಈ ದುರ್ಘಟನೆಯ ನಂತರ ರಾಜನು ವರ್ಸೈಲ್ಸ್‌ನಲ್ಲಿಯೇ ಒಂದು ಅರಮನೆ ಕಟ್ಟಲು ತೀರ್ಮಾನಿಸಿ ಸುತ್ತಲಿನ ಇನ್ನಷ್ಟು ಜಾಗವನ್ನು ಖರೀದಿಸಿ ಫಿಲ್ಬರ್ಟ್ ಲೇ ರಾಯ್ ಎಂಬ ವಾಸ್ತುಶಿಲ್ಪಿಗೆ ಅರಮನೆ ಮತ್ತು ಉದ್ಯಾನವನದ ನಿರ್ಮಾಣ ಕೆಲಸವನ್ನು ವಹಿಸಿದ.

ಮುಂದೆ ಹದಿನಾಲ್ಕನೇ ಲೂಯಿಸ್ ಇಲ್ಲಿಗೆ ಆಗಾಗ್ಗೆ ಬರುತ್ತಿದ್ದನಾದರೂ, ಸ್ಪೇನ್ ದೇಶದ ಮಾರಿಯಾ ಥೆರೆಸಾಳೊಡನೆ 1660ರಲ್ಲಿ ಅವನ ಮದುವೆಯಾದ ನಂತರ ಅವನು ಈ ಸ್ಥಳದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ. ಆಗ ಅವನು ಇಲ್ಲಿನ ಅರಮನೆಯ ಮರುನಿರ್ಮಾಣ ಮತ್ತು ವಿಸ್ತರಣೆ ಮಾಡಲು ನಿರ್ಧರಿಸಿದ. ಲೂಯಿಸ್ ಲೇ ವಾವ್ ಮತ್ತು ಅವನ ಸಹಾಯಕನಾದ ಫ್ರಾನ್ಸಿಸ್ ಡಿ



ಅರಮನೆಯವರಿಗಾಗಿ ಮೀಸಲಾದ ಖಾಸಗಿ ರಾಯಲ್ ಚಾಪೆಲ್‌ನ ಒಳಭಾಗ